# ಕರ್ನಾಟಕ ಸರ್ಕಾರ

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

## ಸಿ.ಸಿ.ನಂ. 685/2014

ಪಿ.ಡಬ್ಲ್ಯೂಃ 6

ಸಿ.ಡಬ್ಲ್ಯೂಃ 6

**ಹೆಸರು** ಃ ಚಿನ್ನಪ್ಪ

**ತಂದೆಯ ಹೆಸರು** ಃ ಕೊಂಡಾಬೋವಿ

**ವಯಸ್ಸು** ಃ 43 ವರ್ಷ

**ಉದ್ಯೋಗ** ಃ ವ್ಯವಸಾಯ

**ವಾಸಸ್ಥಳ** ಃ ಬಾವಿಕೆರೆ

**ದಿನಾಂಕಃ 02-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ಇಸ್ವಿ 2014 ರಲ್ಲಿ ನಾನು ಮತ್ತು ಚಾ.ಸಾ-7 ಬೈಕ್ನಲ್ಲಿ ಬಾವಿಕೆರೆ ಕಡೆಯಿಂದ ತರೀಕೆರೆ ಕಡೆಗೆ ಬೆಳಗ್ಗೆ 11-00 ಗಂಟೆ ಸಮಯದಲ್ಲಿ ಬರುತ್ತಿರುವಾಗ, ಕೃಷಿ ಇಲಾಖೆಯ ವಿಶ್ವವಿದ್ಯಾನಿಲಯದ ಹತ್ತಿರ ಇರುವ ಚಾ.ಸಾ-8 ರವರ ಮನೆಯ ಹತ್ತಿರ ಜನರು ಗುಂಪು ಗೂಡಿದ್ದರು. ಆಗ ನಾವು ಹೋಗಿ ವಿಚಾರಿಸಲಾಗಿ, 1 ನೇ ಆರೋಪಿ, ಸೀತಾರಾಮು, ವೆಂಕಟೇಶ್ ರವರು ಈ ಜಾಗ ನಮ್ಮ ಹೆಸರಿಗೆ ಅಸೆಸ್ಮೆಂಟ್ ಆಗಿದ್ದು ಅದನ್ನು ಸ್ವಚ್ಚಗೊಳಿಸುತ್ತಿದ್ದೇವೆ ಎಂದು ತಿಳಿಸಿದರು. ಅರಸೀಕೆರೆ ಅಸೆಸ್ಮೆಂಟ್ ಸಂಖ್ಯೆ 2/ಬಿ,ಸಿ,ಡಿ ಎಂದು ನಮೂದಿಸಿದ ಅಸೆಸ್ಮೆಂಟ್ ಕಾಪಿಯನ್ನು ನಮಗೆ ಅವರು ತೋರಿಸಿದರು ಆಗ ಸದರಿ ಕಾಪಿಯನ್ನು ನಾನು ಗ್ರಾಮಪಂಚಾಯತಿ ಕಛೇರಿಗೆ ಹೋಗಿ ತಾಳೆ ನೋಡಿ ಪರಿಶೀಲಿಸಲಾಗಿ, ಸದರಿ 2/ಬಿ,ಸಿ,ಡಿ ಎನ್ನುವ ಅಸೆಸ್ಮೆಂಟ್ ಸಂಖ್ಯೆಯನ್ನು ಅಕ್ರಮವಾಗಿ, ಕಾನೂನುಬಾಹಿರವಾಗಿ 2 ನೇ ಆರೋಪಿಯು ನಮೂದಿಸಿರುವುದು ತಿಳಿದುಬಂದಿದ್ದು ಸದರಿ 2 ನೇ ಆರೋಪಿಯು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ.

*2.* ಅಸೆಸ್ಮೆಂಟ್ ನಲ್ಲಿ ಅಕ್ರಮವಾಗಿ ನಮೂದಾಗಿರುವ ಬಗ್ಗೆ ತಿಳಿದ ನಂತರ ನಾನು ಚಾ.ಸಾ-*7,* ಚಾ.ಸಾ-*13* ಹಾಗೂ *15* ರವರ ಜೊತೆ ಸೇರಿ ಅರ್ಜಿಯನ್ನು ಡಿ.ಸಿ, ತಹಶೀಲ್ದಾರ್, ಇ.ಓ, ಸಿ.ಎಸ್. ಹಾಗೂ ಲೋಕಾಯುಕ್ತರಿಗೆ ಸಲ್ಲಿಸಿದೆವು. ಆರೋಪಿತರು ಅಕ್ರಮವಾಗಿ ಅಸೆಸ್ಮೆಂಟ್ ನಲ್ಲಿ ನಮೂದಿಸಿ ನಮ್ಮ ಜಾಗ ಎಂದು ಹೇಳುತ್ತಿದ್ದ ಜಾಗವು ಕೃಷಿ ಇಲಾಖೆಗೆ ಸೇರಿದ್ದು ಅವುಗಳ ವಿಸ್ತೀರ್ಣ ಸೀತಾರಾಮು ರವರಿಗೆ *40* ಇಂಟು *70,* ವೆಂಕಟೇಶ್ ರವರಿಗೆ *25* ಇಂಟು *70,* ಸಂದೇಶ್ ಶೆಟ್ಟಿ ರವರಿಗೆ *35* ಇಂಟು *70* ವಿಸ್ತೀರ್ಣದ ಜಾಗಗಳನ್ನು ಪಿ.ಡಿ.ಓ ರವರು ಬರೆದುಕೊಟ್ಟಿದ್ದರು. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

***ಪಾಟೀಸವಾಲು : 1*** ನೇ ಆರೋಪಿ ***ಪರ*** ಶ್ರೀ ಎ ಆರ್ ಕೆ ***ವಕೀಲರಿಂದ***

ನಾನು ಎಂಕಾಂ ಪದವಿ ಓದಿರುತ್ತೇನೆ. ನಾನು ಈಗ್ಗೆ *20* ವರ್ಷಗಳ ಹಿಂದೆ ಬಾವಿಕೆರೆಯ ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದೆನು. *2010* ರಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಗೆ ಸ್ಪರ್ದಿಸಿದ್ದು, ಸೋತಿರುತ್ತೇನೆ. *2010* ರಲ್ಲಿ *1* ನೇ ಆರೋಪಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, ಅದ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ವಿ ಎಸ್ ಎಸ್ ಎನ್ ಸೊಸೈಟಿಯಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನನಗೂ *1* ನೇ ಆರೋಪಿಗೂ ರಾಜಕೀಯ ದ್ವೇಷಗಳಿವೆ ಎಂದರೆ ಸರಿಯಲ್ಲ. ನಾನು *1* ನೇ ಆರೋಪಿಯ ವಿರೋಧಿ ಬಣದಲ್ಲಿ ಇರುತ್ತೇನೆಂದರೆ ಸಾಕ್ಷಿಯು ಆರೋಪಿಯ ಸೊಸೈಟಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ ತಪ್ಪು ಎಂದು ಹೇಳುವವರ ಜೊತೆ ಇದ್ದೆನೆಂದು ನುಡಿಯುತ್ತಾರೆ. ನನಗೂ *1* ನೇ ಆರೋಪಿಗೂ ದ್ವೇಷವಿದ್ದ ಕಾರಣದಿಂದ ಪ್ರಕರಣಗಳಲ್ಲಿ ನಾನು ಅವರ ವಿರುದ್ದ ಸಾಕ್ಷಿ ನುಡಿಯುತ್ತೇನೆಂದರೆ ಸರಿಯಲ್ಲ.

ನಿಪಿ*7* ಅರ್ಜಿಯನ್ನು ತಹಶೀಲ್ದಾರ್ ರವರಿಗೆ, ನಾವು ಆರೋಪಿತರು ಅಕ್ರಮವಾಗಿ ಅಸೆಸ್ ಮೆಂಟ್ ಬುಕ್ಕಲ್ಲಿ ಖಾತೆಯನ್ನು ತಿದ್ದಿ ನಮೂದಿಸಿದ್ದರು, ಆ ಕಾರಣಕ್ಕೆ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಗ್ರಾಮ ಪಂಚಾಯ್ತಿ ಸದಸ್ಯನಾಗಿರಲಿಲ್ಲ. ನಾನು ಪಂಚಾಯ್ತಿಯ ಪಿ ಡಿ ಒ ರವರಿಗೆ ಅಸೆಸ್ ಮೆಂಟ್ ಪುಸ್ತಕದ ಬಗ್ಗೆ ಕೇಳಲಾಗಿ ಅವರು ಅಸೆಸ್ ಮೆಂಟ್ ಪುಸ್ತಕವನ್ನು ನಮಗೆ ತೋರಿಸಿದ್ದು, ಅದರಲ್ಲಿ ತಿದ್ದಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ತಿದ್ದಿದ ಅಸೆಸ್‌ಮೆಂಟ್ ಪ್ರತಿಯನ್ನು ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಸದರಿ ಅಸೆಸ್ ಮೆಂಟ್ ಪ್ರತಿಯಲ್ಲಿ ಕಾನೂನು ಬಾಹಿರವಾಗಿ ಸೇರ್ಪಡೆ ಮಾಡಿರುತ್ತಾರೆ. *1* ನೇ ಆರೋಪಿ ನಿವೇಶನದ ಬಗ್ಗೆ ನೀಡಿದ ಅರ್ಜಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಪಿ

ಡಿ ಒ ರವರು ಪಡೆಯುತ್ತಾರೆಂದು ನುಡಿಯತ್ತಾರೆ. ನಾನು ಪಂಚಾಯ್ತಿಗೆ ಹೋದಾಗ ಅಸೆಸ್ ಮೆಂಟ್ ಪುಸ್ತಕ ಪಿ ಡಿ ಒ ಪಾಂಡರುಂಗ ರವರ ವಶದಲ್ಲಿತ್ತು. ಸದರಿ ಅಸೆಸ್‌ಮೆಂಟ್ ಪುಸ್ತಕದಲ್ಲಿ *2* ನೇ ಆರೋಪಿಯು ತಿದ್ದುಪಡಿ ಮಾಡಿ ತನ್ನ ಸಹಿಯನ್ನು ಹಾಕಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ನಿಪಿ-*7* ರಲ್ಲಿ ತಿಳಿಸಿದಂತೆ ಅಸೆಸ್ ಮೆಂಟ್‌ನ ನಕಲುಗಳನ್ನು ಮಾಹಿತಿ ಹಕ್ಕಿನ ಅಡಿ ಪಡೆದಿದ್ದು, ಸದರಿ ಮಾಹಿತಿ ಹಕ್ಕಿನ ದಾಖಲಾತಿಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ. ನಿಪಿ-*7* ರಲ್ಲಿ ಹೇಳಿದಂತೆ ದಿನಾಂಕ ***26-11-2013*** ಕ್ಕೆ ಅರ್ಜಿಯನ್ನು ಕೊಟ್ಟಿದ್ದೆನು ಎಂದು ತಪ್ಪಾಗಿ ನಮೂದಾಗಿರುತ್ತದೆ. ನನ್ನ ರಾಜಕೀಯ ವೈಷಮ್ಯಕ್ಕೆ *1* ನೇ ಆರೋಪಿ ವಿರುದ್ದ ನಿಪಿ-*7* ನ್ನು ಸೃಷ್ಟಿಸಿ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ವಿವಾದಿತ ಜಾಗವು ಈ ಮುಂಚೆ ಖಾಲಿ ಜಾಗ ಇದ್ದು, ಈಗ ಅದಕ್ಕೆ ಕಾಂಪೌಂಡ್ ಕಟ್ಟಿರುತ್ತಾರೆ. ವಿವಾದಿತ ಜಾಗದ ಅಕ್ಕಪಕ್ಕದಲ್ಲಿರುವ ರಹೀಂ, ಖಲಂದರ್ ಇರುವ ಜಾಗವು ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ವಿವಾದಿತ ಜಾಗವು ಯಾರಿಗೆ ಸೇರಿದ್ದು, ಎಂದು ಗೊತ್ತು. ಉಳಿದಂತೆ ಅಕ್ಕಪಕ್ಕದ ಜಾಗದ ಬಗ್ಗೆ ನನಗೆ ಗೊತ್ತಿಲ್ಲ. ರಹೀಂ, ಖಲಂದರ್ ರವರು ಇರುವಂತಹ ಜಾಗವು ಕೂಡಾ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ್ದಾಗಿದ್ದು, ಅವರು ನಮ್ಮ ಅನುಯಾಯಿಗಳಾದ್ದರಿಂದ ಅವರ ಬಗ್ಗೆ ಚಕಾರ ಎತ್ತುವುದಿಲ್ಲ ಎಂದರೆ ಸರಿಯಲ್ಲ. *1* ನೇ ಆರೋಪಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿಲ್ಲ, ಯಾವುದೇ ತಿದ್ದುಪಡಿ ಮಾಡಿಸಿಲ್ಲ, ಯಾವತ್ತೂ ವಿವಾದಿತ ಸ್ದಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು *1* ನೇ ಆರೋಪಿಯ ಮೇಲೆ ದ್ವೇಷದಿಂದ ಸುಳ್ಳು ಅರ್ಜಿಯನ್ನು ತಹಶೀಲ್ದಾರ್ ರವರಿಗೆ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪೋಲೀಸರಿಗೆ ಹೇಳಿಕೆಯನ್ನು ವಿವಾದಿತ ಸ್ದಳದಲ್ಲಿ ಪೋಲೀಸರು ಮಹಜರ್ ಮಾಡುವ ಕಾಲಕ್ಕೆ ಬಂದಾಗ ನೀಡಿದ್ದೇನೆಂದು ನುಡಿಯುತ್ತಾರೆ. ನನ್ನ ಸಮಕ್ಷಮ ಪೋಲೀಸರು ಮಹಜರ್ ಮಾಡಿಲ್ಲ ಹಾಗೂ ಸ್ದಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮಹಜರಿಗೆ ಸಹಿ ಮಾಡಿರುತ್ತೇನೆ. ನಾನು ಮಹಜರಿಗೆ ಮಾಡಿಲ್ಲ ಎಂದರೆ ಸರಿಯಲ್ಲ. *1* ನೇ ಆರೋಪಿ ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ಸರಿ. ಆದ್ದರಿಂದ

ಅವರಿಗೆ ನಿವೇಶನದ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿ ಕೊಡುವುದನ್ನೇ ವೃತ್ತಿ ಮಾಡಿಕೊಂಡಿದ್ದು ಸುಳ್ಳು ಅರ್ಜಿ ನೀಡಿರುತ್ತೇನೆಂದರೆ ಸರಿಯಲ್ಲ.

***<u>ಮರುವಿಚಾರಣೆ</u>ಃ ಇರುವುದಿಲ್ಲ.***

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**